ಆ) ಮುಖ್ಯ ಗ್ರಂಥಾಲಯಾಧಿಕಾರಿಗಳು, ಬೆಂಗಳೂರು ನಗರ 1) ಪೂರ್ವ ವಲಯ 2) ಪಶ್ಚಿಮ ವಲಯ 3) ಉತ್ತರ ವಲಯ 4) ದಕ್ಷಣ ವಲಯ 5) ಕೇಂದ್ರ ವಲಯ ನಗರ ಕೇಂದ್ರ ಗ್ರಂಥಾಲಯಗಳು ಇವರಿಗೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ 1965ರ ಕಲಮು 30ರನ್ವಯ (ಸರ್ಕಾರಿ ಆದೇಶ ಸಂ.ಇಡಿ 30 ಡಿಜಿಓ 93 ದಿನಾಂಕ: 26-8-93 ಅಧಿಕಾರ ನೀಡಿದೆ.

ಇ) ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆಯ ಸೆಕ್ಷನ್ 13 ಹಾಗೂ 14ರಡಿಯಲ್ಲಿ ಇಲಾಖೆಯ ಮುಖ್ಯಸ್ಥರು ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರು ನಿಯಂತ್ರಕರಾಗಿರುತ್ತಾರೆ. ಹಣ ಅಸಮರ್ಪಕವಾಗಿ ಖರ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಚಳ್ಳಕೆರೆ ಜ್ಯೂನಿಯರ್ ಕಾಲೇಜು ಮಂಜೂರಾತಿ

1515 (1788) ಶ್ರೀ ಬಸವರಾಜ್ ಮಂಡಿಮಠ.ಜಿ (ಚಳ್ಳಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಆಸಕ್ತಿವಹಿಸಿದೆಯೆ?

ಆ) ಹಾಗಿದ್ದಲ್ಲಿ, ಚಳ್ಳಕೆರೆ ತಾಲ್ಲೂಕ್ ಪರಶುರಾಂಪುರ ಹೋಬಳಿ ಪಿ.ಮಹದೇವಪುರದಲ್ಲಿನ ಸರ್ಕಾರಿ ಪ್ರೌಢಶಾಲೆಯನ್ನು ಜ್ಯೂನಿಯರ್ ಕಾಲೇಜನ್ನಾಗಿ ಪರಿವರ್ತಿಸಲಾಗುವುದೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು

ಆ) ಪಿ.ಮಹದೇವಪುರದ ಸಮೀಪದ ಪರಶುರಾಂಪುರದಲ್ಲಿ ಈಗಾಗಲೇ ಒಂದು ಸರ್ಕಾರಿ ಪದವಿಪೂರ್ವ ಕಾಲೇಜು ಇದೆ. ಸದರಿ ಕಾಲೇಜಿನಲ್ಲಿ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಕ್ರಮವಾಗಿ ಪ್ರಥಮ ಪಿಯುಸಿಯಲ್ಲಿ 142 ಮಂದಿ ಹಾಗೂ ದ್ವಿತೀಯ ಪಿಯುಸಿಯಲ್ಲಿ 97 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಆದ್ದರಿಂದ ಪಿ.ಮಹದೇವಪುರ ಪ್ರೌಢಶಾಲೆಯನ್ನು ಜೂನಿಯರ್ ಕಾಲೇಜನ್ನಾಗಿ ಪರಿವರ್ತಿಸುವ ಅವಶ್ಯಕತೆ ಕಂಡು ಬರುವುದಿಲ್ಲ.

ನಿರ್ಮಲ ಕರ್ನಾಟಕ ಯೋಜನೆಯ ವಿಫಲತೆ

1516 (1789) ಶ್ರೀ ಬಸವರಾಜ್ ಮಂಡಿಮಠ್.ಜಿ (ಚಳ್ಳಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿರ್ಮಲ ಕರ್ನಾಟಕ ಯೋಜನೆಯು ರಾಜ್ಯದಲ್ಲಿ ಪೂರ್ಣ ವಿಫಲಗೊಂಡಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?